ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಸದಸ್ಯರು ತಾಲ್ಲೂಕ್ ಬೋರ್ಡ್ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್‌ಗಾಗಿ ಎಷ್ಟು ಹಣ ಖರ್ಚಾಯಿತು ಎಂದು ಅಸ್‌ಜಾರಿಟಬಲ್ ಆಗಿ ಒಂದು ಪ್ರಶ್ನೆಯನ್ನು ಕೇಳಿದರು. ಈ ಹಣವನ್ನು ತಾಲ್ಲೂಕ್ ಬೋರ್ಡ್ ಚುನಾವಣೆಯ ನಲುವಾಗಿ ಖರ್ಚು ಮಾಡಲಿಲ್ಲ. ಎರ್ಲೆಲ್ಲಿ ಬರಗಾಲ ಇದೆಯೋ ಅದನ್ನು ನೋಡಿಕೊಂಡು ಹಣ ಖರ್ಚು ಮಾಡಲು ತಾಲ್ಲೂಕ್ ಮಟ್ಟದಲ್ಲಿ ಒಂದೊಂದು ಕಮಿಟಿಯನ್ನು ಮಾಡಿ, ಆ ಕಮಿಟಿಯವರ ತೀರ್ಮಾನದ ಪ್ರಕಾರ ಹಣವನ್ನು ಬರಗಾಲದ ಪ್ರಯುಕ್ತ ಖರ್ಚು ಮಾಡಲಾಗಿದೆಯೇ ಹೊರತು ತಾಲ್ಲೂಕ್ ಬೋರ್ಡ್ ಚುನಾವಣೆಯ ನಲುವಾಗಿ ಖರ್ಚು ಮಾಡಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಸಂಬಂಧಪಟ್ಟ ಮಂತ್ರಿಗಳು ಈಗೊಗಲೇ ಉತ್ತರ ಕೊಟ್ಟಿದ್ದರೂ ಸಹ ಮಾನ್ಯ ಮುಖ್ಯ ಮಂತ್ರಿಗಳು ಮತ್ತೆ ಉತ್ತರ ಕೊಡಬಹುದೆ ?

ಅಧ್ಯಕ್ಷರು.—ಮುಖ್ಯ ಮಂತ್ರಿಗಳಿಗೆ ಮತ್ತೆ ಉತ್ತರ ಕೊಡಲು ಅಧಿಕಾರವಿದೆ.

ಶ್ರೀ ಎಚ್. ವಿ. ಕಾಜಲಗಿ.—ನನಗೆ ಪ್ರಶ್ನೆಯ ಮೊದಲನೆಯ ಭಾಗ ಕೇಳಿಸಿತು ಕೊನೇ ಭಾಗ ಮಾತ್ರ ಕೇಳಿಸಲಿಲ್ಲ. ಅದಕ್ಕಾಗಿ ವಿಷಾದಿಸುತ್ತೇನೆ.

Bridge across Krishna River

140. Sri SADASHIVAPPA PATIL (Deodurg).—

Will the Minister for Public Works be pleased to state :—

(*a*) whether Government have accorded sanction for the construction of a bridge across the Krishna river between Deodurg and Shahpur ;

(*b*) if so, when the construction work will be taken up ?

Sri K. LAKKAPPA (Minister for Public Works).—

(*a*) Yes.

(*b*) As early as possible.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಸೇತುವೆಯನ್ನು ನಿರ್ಮಿಸುವ ಬಗ್ಗೆ ಸರ್ಕಾರದ ಮಂಜೂರಾತಿ ಯಾವಾಗ ಆಯಿತು ಎಂಬುದನ್ನು ಹೇಳುತ್ತೀರಾ ?

†ಶ್ರೀ ಕೆ. ಲಕ್ಕಪ್ಪ.—30-5-1968ರಲ್ಲಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಯಿತು. ಜೂನ್ 1968ರಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಆಯಿತು. ಈಗ ಟೆಂಡರ್ ಕರೆಯಲಾಗಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—(ಅ)ಗೆ ಉತ್ತರವಾಗಿ ಸಾಧ್ಯವಾದಷ್ಟು ಬೇಗನೆ ಎಂದು ಹೇಳಿದ್ದೀರಿ, 1968ನೇ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಸೇತುವೆ ಕಟ್ಟುವ ಬಗ್ಗೆ ಅಡಿಗಲ್ಲನ್ನು ಹಾಕಿದರು. 1967-68 ಮತ್ತು 1968-69ನೇ ಸಾಲುಗಳಲ್ಲಿ ಈ ಬಗ್ಗೆ ಇಟ್ಟಿದ್ದ 10 ಲಕ್ಷ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಿಲ್ಲ. ಇದಕ್ಕೆ ಸರ್ಕಾರವೇ ಕಾರಣವೋ ಅಥವಾ ಸ್ಥಳೀಯ ಪ್ರತಿನಿಧಿಗಳು ಕಾರಣರೋ ?

ಶ್ರೀ ಕೆ. ಲಕ್ಕಪ್ಪ.—ಟೆಂಡರ್ ಕರೆಯುವುದರಲ್ಲಿ ಸ್ವಲ್ಪ ವಿಳಂಬವಾಯಿತು. ಈಗ ಟೆಂಡರ್ ಕರೆದು ಅಪ್ರೂವ್ ಮಾಡುವ ಸ್ಟೇಜಿನಲ್ಲಿದೆ. ಅಪ್ರೂವ್ ಆದ ತಕ್ಷಣ ಈ ಸಾಲಿನ 5 ಲಕ್ಷ ರೂಪಾಯಿಗಳನ್ನು ಸಹ ಆಳವಡಿಸಿಕೊಂಡು ತ್ವರಿತವಾಗಿ ಖರ್ಚು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ಈ ಕೆಲಸದ ಎಸ್ಟಿಮೇಟ್ ಕಾಸ್ಟ್ ಎಷ್ಟು ಮತ್ತು ಎಷ್ಟು ವರ್ಷಗಳಲ್ಲಿ ಈ ಕೆಲಸ ಮುಗಿಸಬೇಕೆಂದಿದ್ದೀರಿ ?

ಶ್ರೀ ಕೆ. ಲಕ್ಕಪ್ಪ.—ಒಟ್ಟು ಎಸ್ಟಿಮೇಟ್ ಕಾಸ್ಟ್ ಸೆಂಟ್ರಲ್ ರೋಡ್ ಫಂಡ್ ಪ್ರಕಾರ 27 ಲಕ್ಷ ರೂಪಾಯಿಗಳೆಂದು ಆಂದಾಜಾಗಿತ್ತು. ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಮಾಡುವ ಕಾಲಕ್ಕೆ 27 ಲಕ್ಷ

ರೂಪಾಯಿಗಳಿಂದ 29.86 ಲಕ್ಷ ರೂಪಾಯಿಗಳಿಗೇರಿತು. ಈ ಹೆಚ್ಚಿನ ಎರಡು ಲಕ್ಷ ರೂಪಾಯಿಗಳನ್ನು ಸ್ಪೇಟ್ ಫಂಡ್‌ನಿಂದ ತೆಗೆದುಕೊಂಡು ಕೆಲಸ ಮಾಡಿಸಬೇಕೆಂದು ಆಂದಾಜಿದೆ.

Sri C. K. RAJAIAH SHETTY.—The Hon'ble Chief Minister was pleased to state that it is better to defer big buildings and bridges in the interest of irrigation projects. In view of that, is it not necessary to defer this project?

Sri VEERENDRA PATIL (Chief Minister).—These are the works sanctioned by the Government of India under the Central Road Fund Allocation. Whatever we are spending on the construction of thes bridges we are going to get from the Government of India.

Prohibition in the State

166 Smt. WINNIFRED F. FERNANDES (Coondapur).—

Will the Minister for Finance, Planning and Youth Welfare be pleased to state.—

(*a*) whether there is any rethinking in the matter of reintroducing prohibition in the State, which has recently been scrapped after due and careful consideration in view of the resolution adopted at the A. I. C. C. Session at Goa;

(*b*) if so, whether any decision has been taken in this behalf?

Sri RAMAKRISHNA HEGDE (Minister for Finance, Planning and Youth Welfare).—

(*a*) and (*b*) The matter will be examined at the appropriate time.

ಶ್ರೀ ಬಿ. ಭಾಸ್ಕರಶೆಟ್ಟಿ.—ಗೋವಾದಲ್ಲಿ ನಡೆದ ಎ ಐ ಸಿ ಸಿ ನಿರ್ಣಯದಂತೆ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಇದ್ದಾರೆಂದು ತಿಳಿಯುತ್ತದೆ. ಇದರಂತೆ ನಮ್ಮ ರಾಜ್ಯದಲ್ಲಿ ಇದನ್ನು ಯಾವಾಗ ಜಾರಿಗೆ ತರುತ್ತೀರಿ?

† ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಇಷ್ಟು ವರ್ಷಗಳೊಳಗಾಗಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ನಿರ್ಣಯ ಮಾಡಲಾಗಿದೆ ಎಂದರೆ ಈ ನಿರ್ಣಯದಂತೆ ನಮ್ಮ ರಾಜ್ಯದಲ್ಲಿ ಯಾವಾಗ ಜಾರಿಗೆ ತರುತ್ತೀರಿ?

ಶ್ರೀ ರಾಮಕೃಷ್ಣ ಹೆಗಡೆ.—ಈ ನಿರ್ಣಯದ ಪ್ರಕಾರ ಸುಮಾರು ಏಳು ವರ್ಷಗಳಲ್ಲಿ ಎಂದರೆ 1968 ನೇ ಅಕ್ಟೋಬರು ತಿಂಗಳಿಂದ ಏಳು ವರ್ಷಗಳೊಳಗೆ ಜಾರಿಗೆ ತರಬೇಕೆಂದು ಶಿಫಾರಸನ್ನು ಕಳುಹಿಸಿದ್ದಾರೆ. ಹೀಗೆ ಏಳು ವರ್ಷಗಳಷ್ಟು ಕಾಲಾವಕಾಶ ಇರುವುದರಿಂದ ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಿ ನಿರ್ಣಯ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಹೆಚ್. ಸಿದ್ದವೀರಪ್ಪ.—ಎ. ಐ. ಸಿ. ಸಿ. ನಿರ್ಣಯ ಈ ಸಭೆಯನ್ನು ಪ್ರತಿಬಂಧಿಸುತ್ತದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಈ ಸಭೆಯನ್ನು ಎ. ಐ. ಸಿ. ಸಿ ನಿರ್ಣಯವು ಪ್ರತಿಬಂಧಿಸಲು ಸಾಧ್ಯವಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಹಣಕಾಸಿನ ಮಂತ್ರಿಗಳು ಈ ಗಾಂಧಿ ಶತಾಬ್ದಿ ನಡೆಸುತ್ತಿರುವ ಈ ಕಾಲದಲ್ಲಿ ಪಾನ ನಿರೋಧವನ್ನು ಪೂರ್ಣವಾಗಿ ಜಾರಿಗೆ ಕೊಡಬೇಕು. ಇದನ್ನು ಮತ್ತೆ ಪರಿಶೀಲನೆ ಮಾಡುತ್ತಾರೆಯೇ?